## ಮನಸೂರೆಗೊಂಡ ಚಿತ್ರ

1ನೇ ಜನವರಿ, 2026ರ ಸಂಚಿಕೆಯಲ್ಲಿ ಪ್ರಕಟವಾದ ಕ್ಯಾಲೆಂಡರ್ ಸುಂದರವಾಗಿದೆ. ಅನೂಪ್ ರಾಘ ಟಿ. ಅವರು ಕ್ಲಿಕ್ಕಿಸಿದ್ದ ನಸುಗೆಂಪು ಸಂಜೆ ಸೊಬಗಿನ ಚಿತ್ತಾರದ ಹಿನ್ನೆಲೆಯಲ್ಲಿ ದೈತ್ಯ ತಿರುಗುಚಕ್ರದ ಚಿತ್ರ, ನಿರಂತರವಾಗಿ ಸಾಗುವ ಕಾಲಚಕ್ರವನ್ನು ಬಿಂಬಿಸುವಂತಿದ್ದು, ಮನಸೂರೆಗೊಂಡಿತು.

– ರಮಣ್ ಶೆಟ್ಟಿ ರೆಂಜಾಳ, ಮುಂಬೈ

## ಕಣ್ಣುಕೋರೈಸುವ ದೀಪಾಲಂಕಾರ

‘ಕಣ್ಣಲ್ಲಿ ನೆಲೆನಿಂತ ಸಾಲುದೀಪ’ (ಜ. 01, ಪೂರ್ಣಿಮಾ ಭಟ್ಟ ಸಣ್ಣಕೇರಿ) ಪ್ರವಾಸ ಲೇಖನ ಬಹಳ ಅರ್ಥಪೂರ್ಣವಾಗಿತ್ತು. ಕ್ರಿಸ್‌ಮಸ್ ಹಬ್ಬದ ಸಂದರ್ಭದಲ್ಲಿ ದೀಪಾಲಂಕಾರದಿಂದ ಜಗಮಗಿಸುವ ಲಂಡನ್ ಬೀದಿಗಳ ಚಿತ್ರಣವನ್ನು, ಅಲ್ಲಿ ಕಂಡುಬರುವ ನಾನಾ ಕಥೆಗಳನ್ನು ಬಹಳ ಚೆನ್ನಾಗಿ ನಿರೂಪಿಸಿದ್ದಾರೆ. ದೀಪಾಲಂಕಾರದ ಚಿತ್ರಗಳು ಕಣ್ಣುಕೋರೈಸುವಂತಿವೆ. ದೀಪಾಲಂಕಾರಕ್ಕೂ ಜನರ ಭಾವನೆಗಳಿಗೂ ಇರುವ ನಂಟನ್ನು ಸೊಗಸಾಗಿ ವರ್ಣಿಸಿದ್ದಾರೆ.



–ಚೇತನಾ ಕೆ.ಎಸ್., ಮೈಸೂರು

## ಅರ್ಥವತ್ತಾದ ವಿವರಣೆ

‘ಮಾತೆಂಬುದು ಜ್ಯೋತಿರ್ಲಿಂಗ’ (ಜ. 01, ರಶ್ಮಿ ಎಸ್) ‘ನಿಮ್ಮೊಡನೆ’ಯಲ್ಲಿ ದ್ವೇಷ ಭಾಷಣ ನಿಷೇಧ ಮಸೂದೆ ಬಗ್ಗೆ ಪ್ರಸ್ತಾಪಿಸಿರುವುದು ಸಕಾಲಿಕವಾಗಿದೆ. ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕುವುದು ಮಸೂದೆಯ ಉದ್ದೇಶವಲ್ಲ. ಪೌರಾಣಿಕ ಪಾತ್ರ, ದೇಶಾಭಿಮಾನದ ಪದ್ಯ, ದೇಗುಲ, ಗಗನಚುಂಬಿ ಪ್ರತಿಮೆಗಳಿಗಿಂತ ಉದ್ಯೋಗ, ತಲಾ ಆದಾಯ ಇತ್ಯಾದಿಗಳೇ ಮುಖ್ಯ ಎಂಬುದನ್ನು ಅರ್ಥವತ್ತಾಗಿ ವಿವರಿಸಿದ್ದಾರೆ.

–ರವಿರಾಜ ಬೈಕಂಪಾಡಿ, ಸುರತ್ಕಲ್

## ಇಂಥ ಗ್ರಂಥಾಲಯಗಳು ಬೇಕು

‘ಯುವಮನದಲ್ಲಿ ಕನಕ ದೀವಿಗೆ’ (ಜ. 01, ಎಸ್ಸೆನ್) ಬರಹ ಓದಿದೆ. ಬೆಂಗಳೂರಿನ ಕಲಾಗ್ರಾಮದಲ್ಲಿ, ಕನಕದಾಸರ ವಚನಗಳನ್ನು, ವಿಚಾರಧಾರೆಗಳನ್ನು ಯುವ ಮನಸ್ಸಿನಲ್ಲಿ ಪಸರಿಸುವ ಸೃಜನಾತ್ಮಕ ಕಾರ್ಯಕ್ರಮ ನಡೆಯುತ್ತಿರುವುದು ಸ್ತುತ್ಯಾರ್ಹ. ಗ್ರಂಥಾಲಯದಲ್ಲಿ ವಿಶಿಷ್ಟ ಪುಸ್ತಕಗಳನ್ನು ಯುವಜನರಿಗೆ, ಮಕ್ಕಳಿಗಾಗಿ ವ್ಯವಸ್ಥಿತವಾಗಿ ಇಡಲಾಗಿದೆ. ಇದೇ ರೀತಿ ಎಲ್ಲಾ ದಾಸವರೇಣ್ಯರ, ತತ್ವಪದಕಾರರ, ವಚನಕಾರರ ಸಮಗ್ರ ಕೃತಿಗಳನ್ನು ಒಂದೆಡೆ ತರುವ ಪ್ರಯತ್ನ ಯಾಕಾಗಬಾರದು? ಎಲ್ಲಾ ವಯೋಮಾನದವರು ವಿಚಾರಧಾರೆಗಳನ್ನು ತಿಳಿದುಕೊಳ್ಳುವ ಬಹುತ್ವದ ತಾಣವಾಗಬಹುದು.

–ಸಿ. ಗಂಗಾಧರ ಹರಪನಹಳ್ಳಿ




## ಸರಿಯುವ ಮುನ್ನ...

### 2025ರ ಝಲಕ್

‘2025 ಸರಿಯುವ ಮುನ್ನ’ (ಜ. 01. ಸೂರ್ಯನಾರಾಯಣ ವಿ.) ಮುಖಪುಟ ಬರಹ, 2025ನೇ ವರ್ಷದ ಆಗುಹೋಗುಗಳನ್ನು ಒಮ್ಮೆಲೆ ಕಣ್ಣ ಮುಂದೆ ತಂದು ನಿಲ್ಲಿಸಿತು. ಹಲವು ಸಂಗತಿಗಳನ್ನು ಮೆಲುಕು ಹಾಕಿಸಿತು. ಈ ವರ್ಷದಲ್ಲಿ ಸಂತಸದ ಸಂಗತಿಗಳಿಗಿಂತ ದುರಂತಗಳೇ ಹೆಚ್ಚಾಗಿರುವುದು ಎದ್ದು ಕಾಣಿಸಿತು. ದೇಶ ವಿದೇಶಗಳಲ್ಲಿ ಜರುಗಿದ ಪ್ರಮುಖ ಘಟನೆಗಳ, ಬಹುಮುಖ್ಯ ಬೆಳವಣಿಗೆಗಳ ಸಂಪೂರ್ಣ ಅವಲೋಕನ ಒದಗಿಸಿದ ಬರಹ. ‘ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲೊಂದು ಸುತ್ತು...’ (ಇ.ಎಸ್. ಸುಧೀಂದ್ರ ಪ್ರಸಾದ್) ಲೇಖನವೂ ವೈಜ್ಞಾನಿಕ, ತಂತ್ರಜ್ಞಾನ ಹಾಗೂ ಔಷಧ ಕ್ಷೇತ್ರದಲ್ಲಾದ ಪ್ರಮುಖ ಅಭಿವೃದ್ಧಿಗಳು, ಸಾಧನೆಗಳ ಇಣುಕುನೋಟ ಒದಗಿಸಿತು.

–ಕಾರ್ತಿಕ್ ಎಸ್., ಬೆಂಗಳೂರು

## ಉತ್ತರ ಕರ್ನಾಟಕದ ಭಾಷೆ

ಬಸು ಬೇವಿನಗಿಡದ ಅವರ ‘ನಂಬಿಕೆಯ ನೂಲು’ ಕಾದಂಬರಿಯಲ್ಲಿ ಮಾಯಕ್ಕಳಿಂದ ಪಕ್ಕಾ ಉತ್ತರ ಕರ್ನಾಟಕ ಜವಾರಿ ಭಾಷೆ ಮೂಡಿಬರುತ್ತಿರುವುದು ಸ್ವಾಗತಾರ್ಹ. ಮಾಯಕ್ಕಳ ದಿಟ್ಟತನ ಆರಂಭದಲ್ಲಿಯೇ ಗೊತ್ತಾಗುತ್ತಿದ್ದು, ಮುಂದೆ ಓದಲು ಕುತೂಹಲ ಮೂಡಿಸಿದೆ.

–ಸಿ.ಕೆ. ಗಣಪ್ಪನವರ ಮುಂಡರಗಿ, ಗದಗ

## ಮನಸೆಳೆದ ಮುಗ್ಧ ಮನಸು

‘ನೀನೇ ಗೊಂಬೆ ನಿನಗ್ಯಾಕೋ ಗೊಂಬೆ’ (ಜ. 01, ಶೇಖರಯ್ಯ ಟಿ.ಎಚ್.ಎಂ) ‘ಎಳೆಯರ ಅಂಗಳ’ದಲ್ಲಿನ ಕಥೆಯಲ್ಲಿ ಅರಳಿದ ಮುಗ್ಧ ಮನಸಿನ ಬಾಲಕ ಬಸವೇಶ ಮತ್ತು ಅವರ ತಾಯಿಯ ಮನಕಲಕುವ ಸಂಭಾಷಣೆ ಮನಸ್ಸು ಕರಗುವಂತೆ ಮಾಡಿತು. ಮುಗ್ಧ ಮನಸಿನ ಮಕ್ಕಳಲ್ಲಿ ತಾಯಿಯ ನೋವು, ನಲಿವಿನ ಭಾವನೆ ಮತ್ತು ಸ್ಪಂದನೆಗೆ ಸಾಕ್ಷಿಯಾಗಿದೆ. ಇಂಥ ಲೇಖನಗಳಿಂದ ಮಕ್ಕಳ ಮನ ಪರಿವರ್ತನೆಯಾಗಲಿ.

–ಕೆ.ಎಂ. ಕೊಟ್ರಸ್ವಾಮಿ, ಸಂಡೂರು

## ಪೋಷಕರಿಗೆ ದಾರಿದೀಪ

‘ಮಕ್ಕಳಿಗೆ ಮೊಬೈಲ್ ಕೊಡಿ! ಆದರೆ...’ (ಜ. 01, ಎಸ್.ಎಸ್. ಹಿರೇಮಠ) ಇಂದಿನ ಪೋಷಕರಿಗೆ ದಾರಿದೀಪವಾಗುವಂತಿರುವ ಅತ್ಯುತ್ತಮ ಲೇಖನ. ಜವಾಬ್ದಾರಿಯೊಂದಿಗೆ, ಪ್ರೀತಿಯೊಂದಿಗೆ, ಮಾರ್ಗದರ್ಶನದೊಂದಿಗೆ ‘ಮಕ್ಕಳಿಗೆ ಮೊಬೈಲ್ ಕೊಡಿ’ ಎಂದು ಹೇಳುವ ಲೇಖಕರ ಕಳಕಳಿ ಅದ್ಭುತವಾಗಿದೆ.

–ಡಾ. ಮಹಾಬಲರಾಜು ಡಿ.ಕೆ., ದಾವಣಗೆರೆ

## ಹದ್ದಿನ ಕಣ್ಣಿನ ಕಾವಲು ಬೇಕೇ ಬೇಕು

ಬರಹವು ಮಕ್ಕಳಿಗೆ ಮೊಬೈಲ್ ನೀಡುವ ಮುನ್ನ ಏನೆಲ್ಲಾ ಅಂಶಗಳನ್ನು ಪಾಲಿಸಬೇಕು ಎಂಬುದರ ಕುರಿತು ಮಾಹಿತಿ ನೀಡಿರುವುದು ಶ್ಲಾಘನೀಯ. ಆದರೆ ಮಕ್ಕಳ ಮೊಬೈಲ್ ಬಳಕೆ ಮೇಲೆ ಸದಾ ಹದ್ದಿನ ಕಣ್ಣಿನ ಕಾವಲಿಡಬೇಕಾಗಿರುವುದು ಈಗಿನ ಪರಿಸ್ಥಿತಿಯಲ್ಲಿ ಅವಶ್ಯಕ. ಇತ್ತೀಚೆಗಷ್ಟೇ ಮೊಬೈಲ್ ಫೋನ್ ಬಳಕೆಗೆ ಕೆಲವು ನಿರ್ಬಂಧವಿಟ್ಟು (ಹದಿನಾರು ವರ್ಷದೊಳಗಿನ ಮಕ್ಕಳಿಗೆ) ಬ್ಯಾನ್ ಮಾಡಿದ ಪ್ರಪಂಚದ ಮೊಟ್ಟ ಮೊದಲ ದೇಶವಾಗಿ ಮಹತ್ವದ ಹೆಜ್ಜೆಯಿಟ್ಟ ಆಸ್ಟ್ರೇಲಿಯಾ ನಡೆ ನೆನಪಾಯಿತು. ಉತ್ತಮ ವಿದ್ಯಾಭ್ಯಾಸದ ವಾತಾವರಣ, ಗಮನ ಭಂಗವಿಲ್ಲದಿರುವಿಕೆ, ನಡವಳಿಕೆಯ ಸಮಸ್ಯೆಗಳಿಂದ ಮುಕ್ತವಾಗುವಿಕೆ ಇತ್ಯಾದಿ ಧನಾತ್ಮಕ ಪರಿಣಾಮ ಬೀರುವ ಅನೇಕ ಅಂಶಗಳು ಮೊಬೈಲ್ ಬ್ಯಾನ್‌ನಿಂದ ಉಂಟಾಗಿರುವುದು ಗಮನಾರ್ಹ. ನಮ್ಮ ದೇಶವೂ ಈ ಹೆಜ್ಜೆಯಿಟ್ಟರೆ ಡಿಜಿಟಲ್ ಕಿರುಕುಳ, ಮಾನಸಿಕ ಒತ್ತಡ, ಬೆದರಿಕೆ, ಅಮಾನವೀಯ ನಡವಳಿಕೆಗಳಿಂದ ಮಕ್ಕಳು ಪಾರಾಗುವರು ಎಂಬ ಆಶಯ ನಮ್ಮದು.



–ಸುಪೋಷಿಣಿ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in